## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಸುರೇಶ್ ಮೋರೆ ಬಿನ್ ವಿನಾಯಕ ರಾವ್ ಮೋರೆ, ಕಿರಿಯ ಇಂಜಿನಿಯರ್, ತಾಲ್ಲೂಕು ಪಂಚಾಯತಿ, ಬಸವಕಲ್ಯಾಣ ಇವರ ಅಮಾನತ್ತು ತೆರವುಗೊಳಿಸುವ ಬಗ್ಗೆ – ಆದೇಶ.

**ಓದಲಾಗಿದೆ:-**

1. ಅಪರ ನಿಬಂಧಕರು ವಿಚಾರಣೆಗಳು-7 ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಪತ್ರ ಸಂಖ್ಯೆ. Compt /Uplok /GLB-505 /2006/ARE-7, ದಿನಾಂಕ. 24-08-2011.
2. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 28 ಇಎನ್‌ಕ್ಯೂ 2011 ದಿನಾಂಕ. 28-09-2011
3. ಶ್ರೀ ಸುರೇಶ್ ಮೋರೆ, ಕಿರಿಯ ಇಂಜಿನಿಯರ್ ರವರ ಮನವಿ ದಿನಾಂಕ. 19-10-2011.

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ. 24-08-2011ರ ಪತ್ರದಲ್ಲಿ ಅಪರ ನಿಬಂಧಕರು ವಿಚಾರಣೆಗಳು-7 ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಶ್ರೀ ಸುರೇಶ್ ಮೋರೆ ಬಿನ್ ವಿನಾಯಕ ರಾವ್ ಮೋರೆ, ಕಿರಿಯ ಇಂಜಿನಿಯರ್, ತಾಲ್ಲೂಕು ಪಂಚಾಯತಿ, ಬಸವಕಲ್ಯಾಣ ರವರು ಅಕ್ರಮ ಸಂಭಾವನೆಯನ್ನು ಬಯಸಿದ್ದಾರೆಂಬ ಆರೋಪಗಳ ಮೇರೆಗೆ ಲೋಕಾಯುಕ್ತರವರು ಕಾಯ್ದೆ ಕಲಂ 12 (3)ರ ಮೂಲ ವರದಿಯನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಕಳುಹಿಸಿ ಅದರ ಶಿಫಾರಸ್ಸಿನನ್ವಯ ಸಕ್ಷಮ ಪ್ರಾಧಿಕಾರವು ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಕ್ರಮದ ಬಗ್ಗೆ 3 ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12 (4)ರ ಪ್ರಕಾರ ವರದಿ ಮಾಡಬೇಕೆಂದು ತಿಳಿಸಿದ್ದರು.

ಫಿರ್ಯಾಧಿದಾರರಾದ ಶ್ರೀ ವೆಂಕಟರಾವ್ ಬಿನ್ ಬಾಪೂರಾವ್ ಬೊಂಡಗೆ, ಲಿಂಬಾಪುರ, ಬಸವಕಲ್ಯಾಣ ತಾಲ್ಲೂಕು, ಬೀದರ್ ಜಿಲ್ಲೆ ಇವರು ಆರೋಪಿತರಾದ ಶ್ರೀ ಸುರೇಶ್ ಮೋರೆ ಬಿನ್ ವಿನಾಯಕ ರಾವ್ ಮೋರೆ, ಕಿರಿಯ ಇಂಜಿನಿಯರ್, ತಾಲ್ಲೂಕು ಪಂಚಾಯತಿ, ಬಸವಕಲ್ಯಾಣ ಇವರ ವಿರುದ್ಧ ನೀಡಿರುವ ಲಿಖಿತ ಫಿರ್ಯಾದಿನ ಮೇರೆಗೆ ದಿನಾಂಕ. 25-01-2006ರಂದು ಫಿರ್ಯಾದುದಾರರಾದ ಶ್ರೀ ವೆಂಕಟರಾವ್ ಬಿನ್ ಬಾಪೂರಾವ್ ಬೊಂಡಗೆ, ಲಿಂಬಾಪುರ, ಬಸವಕಲ್ಯಾಣ ತಾಲ್ಲೂಕು, ಬೀದರ್ ಜಿಲ್ಲೆ ಇವರು ಜಲನಿರ್ಮಲ ಯೋಜನೆಯಡಿಯಲ್ಲಿ ಫಿರ್ಯಾಧಿದಾರರ ಗ್ರಾಮದಲ್ಲಿ ಓವರ್‌ಹೆಡ್ ಟ್ಯಾಂಕ್ ನಿರ್ಮಾಣ ಮಾಡುವ ಸಲುವಾಗಿ ರೂ. 10,000-00 ಗಳ ಅಕ್ರಮ ಸಂಭಾವನೆಯನ್ನು ಬಯಸಿದ್ದಾರೆಂಬ ದೂರಿನ ಮೇರೆಗೆ ಆರೋಪಿತ ನೌಕರರ ವಿರುದ್ಧ ಅಪರಾದ ಸಂಖ್ಯೆ. 1/2006 ರಲ್ಲಿ ದಾಖಲಿಸಿ ಕರ್ನಾಟಕ ಲೋಕಾಯುಕ್ತ ಪೋಲೀಸ್ ಠಾಣೆ, ಬೀದರ್ ಪೋಲೀಸ್ ವಿಭಾಗರವರು ಮೊಕದ್ದಮೆಯನ್ನು ದಾಖಲಿಸಿ, ತನಿಖಾಧಿಕಾರಿಯ ಅಂತಿಮ ವರದಿಯ ನಕಲು ಮತ್ತು ತನಿಖಾ ದಾಖಲಾತಿಗಳನ್ನು ಮಾನ್ಯ ಆರಕ್ಷಕ ಮಹಾನಿರೀಕ್ಷಕರು, ಪೋಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ಕಳುಹಿಸುತ್ತಾ, ಆಪಾದಿತರು ಅಕ್ರಮ ಸಂಭಾವನೆಯನ್ನು ಪಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಅವರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸುವಂತೆ ಕೋರಿದ್ದರು.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ. 28-09-2011ರ ಸರ್ಕಾರದ ಆದೇಶದಲ್ಲಿ ಶ್ರೀ ಸುರೇಶ್ ಮೋರೆ ಬಿನ್ ವಿನಾಯಕ ರಾವ್ ಮೋರೆ, ಕಿರಿಯ ಇಂಜಿನಿಯರ್, ತಾಲ್ಲೂಕು ಪಂಚಾಯತಿ, ಬಸವಕಲ್ಯಾಣ ರವರು ಸರ್ಕಾರಿ ಕೆಲಸವನ್ನು ನಿರ್ವಹಿಸಲು ಫಿರ್ಯಾದುದಾರರಿಂದ ಅಕ್ರಮ ಸಂಭಾವನೆಯನ್ನು ಬಯಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದ ಹಿನ್ನೆಲೆಯಲ್ಲಿ ಮಾನ್ಯ ಉಪ ಲೋಕಾಯುಕ್ತರ ವರದಿಯನ್ನಾಧರಿಸಿ ಅವರ ವಿರುದ್ಧದ ಲೋಕಾಯುಕ್ತ ಇಲಾಖಾ ವಿಚಾರಣೆಯನ್ನು ಬಾಕಿಯಿರಿಸಿ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು. ಮುಂದುವರೆದು, ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಿ ಆದೇಶ ಹೊರಡಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ. 19-10-2011ರ ಮನವಿಯಲ್ಲಿ ಶ್ರೀ ಸುರೇಶ್ ಮೋರೆ, ಕಿರಿಯ ಇಂಜಿನಿಯರ್ ರವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೀದರ್‌ರವರು ದಿನಾಂಕ. 31-01-2006ರಂದು ಅವರನ್ನು ಈಗಾಗಲೇ ಸೇವೆಯಿಂದ ಅಮಾನತ್ತುಗೊಳಿಸಿ ನಂತರ ದಿನಾಂಕ. 21-03-2006ರ ಆದೇಶದಲ್ಲಿ ಲೋಕಾಯುಕ್ತದ ಹಂತದಲ್ಲಿ ವಿಚಾರಣೆಯನ್ನು ಬಾಕಿಯಿಟ್ಟು ಅಮಾನತ್ತನ್ನು ತೆರವುಗೊಳಿಸಿ ಕೆಲಸಕ್ಕೆ ಪುನರ್ ನೇಮಿಸಿಕೊಂಡು ತಾಲ್ಲೂಕು ಪಂಚಾಯತ್, ಭಾಲ್ಕಿ ಇಲ್ಲಿಗೆ ಸ್ಥಳನಿಯುಕ್ತಿ ನೀಡಿದ್ದು, ಆ ಪ್ರಕಾರ ಕಾರ್ಯನಿರ್ವಹಿಸುತ್ತಿದ್ದು, ಪುನ: ಸರ್ಕಾರವು ದಿನಾಂಕ. 28-09-2011ರ ಆದೇಶದಲ್ಲಿ ಅಮಾನತ್ತುಗೊಳಿಸಿರುವುದು ಸೂಕ್ತವಲ್ಲವೆಂದು ತಿಳಿಸಿ, ಅಮಾನತ್ತನ್ನು ತೆರವುಗೊಳಿಸಿ ಕೆಲಸಕ್ಕೆ ಪುನರ್ ಸ್ಥಾಪಿಸುವಂತೆ ಕೋರಿದ್ದಾರೆ.

ಶ್ರೀ ಸುರೇಶ್ ಮೋರೆ, ಕಿರಿಯ ಇಂಜಿನಿಯರ್‌ರವರ ಮನವಿಯಲ್ಲಿನ ಅಂಶಗಳನ್ನು ಪರಿಶೀಲಿಸಿ, ಅವರ ಅಮಾನತ್ತನ್ನು ತೆರವುಗೊಳಿಸಿ ಸೇವೆಯಲ್ಲಿ ಪುನರ್ ಸ್ಥಾಪಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ

**ಆದೇಶ ಸಂಖ್ಯೆ. ಗ್ರಾಅಪ 28 ಇಎನ್‌ಕ್ಯೂ 2011, ಬೆಂಗಳೂರು,**
**ದಿನಾಂಕ. 13-12-2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಸುರೇಶ್ ಮೋರೆ ಬಿನ್ ವಿನಾಯಕ ರಾವ್ ಮೋರೆ, ಕಿರಿಯ ಇಂಜಿನಿಯರ್ ರವರ ವಿರುದ್ಧ ಲೋಕಾಯುಕ್ತಕಚೇರಿಯಲ್ಲಿ ಬಾಕಿಯಿರುವ ಇಲಾಖಾ ವಿಚಾರಣೆಯನ್ನು ಬಾಕಿಯಿರಿಸಿ ಅಮಾನತ್ತನ್ನು ತೆರವುಗೊಳಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಲ್ಲಿ ಪುನರ್ ಸ್ಥಾಪಿಸಿದೆ ಹಾಗೂ ಸದರಿಯವರನ್ನು ತಾಲ್ಲೂಕು ಪಂಚಾಯತ್, ಭಾಲ್ಕಿ ಇಲ್ಲಿ ಖಾಲಿ ಇರುವ ಕಿರಿಯ ಇಂಜಿನಿಯರ್ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

13/12/2011
(ಎನ್.ವೈ.ಸಾಗರ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ
3. ಅಪರ ನಿಬಂಧಕರು ವಿಚಾರಣೆಗಳು-7, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

4. ಉಪ ಲೋಕಾಯುಕ್ತರು-1, ಕರ್ನಾಟಕ ರಾಜ್ಯ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ರಿಸಾಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು,
6. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ., ರಾಜಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು.
7. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೀದರ್.
9. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಬಸವಕಲ್ಯಾಣ.
10. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಭಾಲ್ಕಿ
11. ಸಂಬಂಧಪಟ್ಟ ನೌಕರರಿಗೆ.
12. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, (ಸೇವೆಗಳು-ಎ) / (ಸೇವೆಗಳು-ಸಿ)
13. ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
14. ಗ್ರಾ.ಅ.ಪಂ.ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ/ ಉಪ ಕಾರ್ಯದರ್ಶಿ ಇವರುಗಳ ಅಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
15. ರಕ್ಷಾ ಕಡತ / ಮಾಹಿತಿ ಕೇಂದ್ರ/ ಹೆಚ್ಚುವರಿ ಪ್ರತಿಗಳು.